ಬೆಂಗಳೂರಿನಲ್ಲಿ ಎನ್‌ಫೋಲ್ಡ್ ಎಂಬ ಸಂಸ್ಥೆ ಇದೆ. ಅದು ಮಕ್ಕಳ ಮೇಲೆ ನಡೆಯುವ ಲೈಂಗಿಕ ದೌರ್ಜನ್ಯದ ಕುರಿತು ವಿಶೇಷವಾಗಿ ಅಧ್ಯಯನ ಮಾಡುತ್ತದೆ. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆಯುವ, ದೌರ್ಜನ್ಯಕ್ಕೆ ತುತ್ತಾದ ಮಕ್ಕಳಿಗೆ ಪುನರ್ವಸತಿ ಕಲ್ಪಿಸುವ ಕಾಳಜಿಯನ್ನು ಮಾಡುತ್ತದೆ. ಅದರ ಅಧ್ಯಯನಗಳು ಒಪ್ಪಿತ ಸಂಬಂಧಗಳಲ್ಲಿ ಶೇ. 80ರಷ್ಟು ಅತ್ಯಾಚಾರ ಎಂದು ಪೋಕ್ಸೊ ಕಾಯ್ದೆಯಡಿ ದಾಖಲಾಗುತ್ತವೆ ಎಂದು ಹೇಳಿವೆ. ಇದರಿಂದ 16–18ನೇ ವಯಸ್ಸಿನ ಮಕ್ಕಳಿಗೆ ಅನ್ಯಾಯ ಆಗುತ್ತಿದೆ. ಪರಸ್ಪರ ಲೈಂಗಿಕ ಸಂಪರ್ಕವನ್ನು ಅತ್ಯಾಚಾರ ಎಂದು ಅಪರಾಧೀಕರಣ ಮಾಡುವುದು ತಪ್ಪು ಎನ್ನುವುದು ಇಲ್ಲಿನ ಸಾರಾಂಶವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ವಯಸ್ಸನ್ನು 16ಕ್ಕೆ ಇಳಿಸಬೇಕು ಎನ್ನುವ ವಾದ ಇದೆ.

ಮಕ್ಕಳ ಶಿಕ್ಷಣ ದೃಷ್ಟಿಯಲ್ಲಿಯೂ ಈ ವಾದವನ್ನು ಸಹಮತದಿಂದ ನೋಡಬೇಕು. ಮಕ್ಕಳಿಗೆ ಶಾಲೆಯಲ್ಲಿ ಲೈಂಗಿಕ ಶಿಕ್ಷಣದ ಪರಿಚಯವನ್ನು ಅವಶ್ಯವಾಗಿ ಮಾಡಬೇಕು. ನಾವು ಆ ನಿಟ್ಟಿನಲ್ಲಿ ಪ್ರಯತ್ನಿಸಿದಾಗೆಲ್ಲ ಮಡಿವಂತಿಕೆಯ ವರ್ಗದಿಂದ ವಿರೋಧ ವ್ಯಕ್ತವಾಗುತ್ತದೆ. ಸಂಪ್ರದಾಯವಾದಿಗಳ ವಿರೋಧವನ್ನು ಮೀರಿ ನಮ್ಮ ಮಕ್ಕಳಿಗೆ ಲೈಂಗಿಕ ಶಿಕ್ಷಣವನ್ನು ಕೊಡಬೇಕು. ಅವರಿಗೆ ಆ ಬಗ್ಗೆ ಸ್ಪಷ್ಟ ಅರಿವು ಮೂಡಿದರೆ ಪೋಕ್ಸೊದಂತಹ ಪ್ರಕಣರಗಳೇ ಕಡಿಮೆ ಆಗುತ್ತವೆ. ಲೈಂಗಿಕತೆ ಅಂದರೆ ಏನು? ಅದರ ಸಾಧಕ ಬಾಧಕಗಳೇನು ಎಂಬುದು ಅವರಿಗೆ ಗೊತ್ತಾಗುತ್ತದೆ. ಅಷ್ಟಕ್ಕೂ ಅವರು ಲೈಂಗಿಕ ಸಂಬಂಧ ಏರ್ಪಟ್ಟರೆ ಮಾಹಿತಿಪೂರ್ಣ ನಿರ್ಣಯವೇ ಆಗಿರುತ್ತದೆ. ವಿಷಯ ಗೊತ್ತಿಲ್ಲದೆ ಒಂದು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೂ ವಿಷಯ ತಿಳಿದು ತೆಗೆದುಕೊಳ್ಳುವುದಕ್ಕೂ ವ್ಯತ್ಯಾಸ ಇದೆ.


ವಿ.ಪಿ. ನಿರಂಜನಾರಾಧ್ಯ

ಈ ಹಿನ್ನೆಲೆಯಲ್ಲಿ ಶಾಲೆಗಳಲ್ಲಿ ಯಾವ ರೀತಿಯ ಲೈಂಗಿಕ ಶಿಕ್ಷಣವನ್ನು ನೀಡಬೇಕು ಎನ್ನುವುದನ್ನು ಯೋಚಿಸಬೇಕು. 13ರಿಂದ 18 ವರ್ಷದ ಮಕ್ಕಳಿಗೆ ಈ ಬಗ್ಗೆ ಸ್ಪಷ್ಟವಾದ ಅರಿವು ಮೂಡಿಸುವ ಕೆಲಸ ಆಗಬೇಕು. 16ರಿಂದ 18ನೇ ವರ್ಷದ ಮಕ್ಕಳ ಲೈಂಗಿಕತೆಯನ್ನು ಅಪರಾಧೀಕರಣ ಮಾಡುವುದಕ್ಕೆ ತಿದ್ದುಪಡಿಯನ್ನು ತರಬೇಕಿದೆ. ಭಾರತೀಯ ದಂಡ ಸಂಹಿತೆಯಲ್ಲೂ ಸುಧಾರಣೆ ಆಗಬೇಕಿದೆ. ಸಹಮತ ಇರುವ ಸಂಬಂಧವನ್ನು ರೇಪ್ ಎಂದು ಪರಿಗಣಿಸುವ ಅಗತ್ಯ ಇಲ್ಲ. ಸಹಮತದ ಸಂಬಂಧವನ್ನೂ ಭಾರತೀಯ ಮಡಿವಂತಿಕೆಯ ಮನಸುಗಳು ದೊಡ್ಡ ತಪ್ಪು ಎಂದು ನೋಡುತ್ತವೆ. ಆದರೆ ಅದು ಅತ್ಯಾಚಾರದಂತಹ ಅಪರಾಧ ಅಲ್ಲ. ಅತ್ಯಾಚಾರಕ್ಕೆ ಖಂಡಿತ ಶಿಕ್ಷೆ ಆಗಲೇಬೇಕು. ಆದರೆ ಸಹಮತದ ಸಂಬಂಧವನ್ನು ಆ ಆಯಾಮದಲ್ಲಿ ನೋಡಲು ಆಗುವುದಿಲ್ಲ. ಆ ವಯಸ್ಸಿನ ಪ್ರಣಯ ಪ್ರೌಢ ವಯಸ್ಸಿನ ಮಕ್ಕಳ ನಿರ್ಣಯ ಆಗಿದ್ದರೆ ಅದು ಅಪರಾಧ ಆಗಬಾರದು. ಅದು ಅವರ ವೈಯಕ್ತಿಕತೆ, ಖಾಸಗಿತನ, ಗೌಪ್ಯತೆ, ಘನತೆಯ ಬದುಕಿಗೆ ಧಕ್ಕೆ ಉಂಟುಮಾಡುತ್ತದೆ. ತಮ್ಮ ಅನಿಸಿಕೆಯನ್ನು ಪ್ರಕಟಿಸಲು ನಿರ್ಬಂಧ ವಿಧಿಸಿದಂತೆ ಆಗುತ್ತದೆ. ಇದು ಹಕ್ಕಿನ ಉಲ್ಲಂಘನೆ ಮಾಡಿದಂತೆ ಆಗುತ್ತದೆ. ಮಕ್ಕಳ ಖಾಸಗಿ ಬದುಕಿಗೆ ಅಡ್ಡಿ ಆಗದಂತೆ ನೋಡುವುದು ಇವತ್ತಿನ ತುರ್ತು.

**ಅರಳುವ ಮಕ್ಕಳ ನಡುವಿನ ಪ್ರಣಯ ಪಾಶವಾಗದೆ ಇರಲಿ**

ಈ ವಿಷಯಗಳನ್ನು ಚರ್ಚಿಸುವಾಗ ಮಕ್ಕಳ ಬೆಳವಣಿಗೆಯನ್ನು ಸೂಕ್ಷ್ಮವಾಗಿ ಗಮನಿಸಬೇಕು. ಹಿಂದೆ 18 ವರ್ಷ ನಿಗದಿಪಡಿಸುವಾಗ ಅವರ ದೈಹಿಕ ಮಾನಸಿಕ ಬೆಳವಣಿಗೆ ಆಧರಿಸಿತ್ತು. ಈಗ ಮಕ್ಕಳು ಬೇಗ ಪ್ರೌಢಾವಸ್ಥೆಗೆ ಬರುತ್ತಿದ್ದಾರೆ. ವಯೋಸಹಜ ಜೈವಿಕ ಆಕರ್ಷಣೆ ಆಸೆಗಳೂ ಮೂಡುತ್ತವೆ. ಲೈಂಗಿಕತೆಯ ಇತಿಮಿತಿಗಳು, ಸಾಧಕ ಬಾಧಕಗಳ ಬಗ್ಗೆ ಸ್ಪಷ್ಟ ಮಾಹಿತಿ ಇರಬೇಕು. ಆ ತಿಳಿವಳಿಕೆ ಇದ್ದರೆ ಮಕ್ಕಳು ಅನಾಹುತದ ತೀರ್ಮಾನ ಮಾಡಲ್ಲ. ಮಾಹಿತಿಯ ಕೊರತೆಯಿಂದಲೇ ಹೆಚ್ಚಿನ ಅನಾಹುತಗಳು ಆಗುತ್ತಿವೆ. ಮಕ್ಕಳಿಗೆ ಅರಿವು ಮೂಡಿಸಿದರೆ ಅಂತಹ ಪ್ರಕರಣಗಳ ಪ್ರಮಾಣವೂ ಕಡಿಮೆ ಮಾಡುತ್ತವೆ. ಯಾವುದೇ ತೀರ್ಮಾನ ಮಾಡಲು ಅವರಿಗೆ ಪೂರ್ಣಪ್ರಮಾಣದ ಮಾಹಿತಿಯನ್ನು ನೀಡುವ ನಿಟ್ಟಿನಲ್ಲಿ ಶಿಕ್ಷಣ ರೂಪಿಸಬೇಕು ಎಂದೆನಿಸುತ್ತದೆ.

ಹದಿಹರೆಯದ ಪ್ರಣಯವನ್ನು ಕಾನೂನಿನ ದೃಷ್ಟಿಯಲ್ಲಿ ನೋಡುವುದು ಒಂದಾದರೆ, ಅವರ ಸಾಮಾಜಿಕ ಘನತೆಯ ಬದುಕಿನ ಹಕ್ಕಿನ ದೃಷ್ಟಿಯಿಂದಲೂ ನೋಡಬೇಕಾಗುತ್ತದೆ. ಇಲ್ಲದಿದ್ದರೆ ಆ ವಯೋಮಾನದ ಸಹಮತದ ಸಂಬಂಧಗಳನ್ನೆಲ್ಲ ಅತ್ಯಾಚಾರ ಎಂದು ಹಣೆಪಟ್ಟಿ ಕಟ್ಟಿ ಅವರನ್ನೆಲ್ಲ ಜೈಲಲ್ಲಿ ಇಡಲು ಆಗುವುದಿಲ್ಲ. ಬೆಳೆಯಬೇಕಾದ ಗಂಡುಮಕ್ಕಳನ್ನು ಜೈಲಿಗೆ ಹಾಕುವುದಾಗಲಿ, ಹೆಣ್ಣುಮಕ್ಕಳನ್ನು ಬಾಲಾಪರಾಧ ಕೇಂದ್ರಗಳಲ್ಲಿ ಬೆಳೆಸುವುದಾಗಲೀ ನಾಗರಿಕ ಸಮಾಜದ ಕೆಲಸ ಅಲ್ಲ.

## ಎಳೆತನದಲ್ಲಿ ತಾಯ್ತನ

ಮಕ್ಕಳಿಗೆ ಲೈಂಗಿಕ ವಿಷಯದ ತಿಳಿವಳಿಕೆ ಇಲ್ಲದೆ ಇರುವುದರಿಂದ ಹದಿಹರೆಯದಲ್ಲಿ ಗರ್ಭ ಧರಿಸುವುದನ್ನು ಕಾಣುತ್ತಿದ್ದೇವೆ. ಆ ಮಕ್ಕಳ ಅಜ್ಞಾನದಿಂದ ಬದುಕು ಹಾಳಾಗುತ್ತದೆ. ಅತ್ಯಾಚಾರ ಮತ್ತು ಸಹಮತದ ಸಂಬಂಧಕ್ಕೂ ವ್ಯತ್ಯಾಸವಿದೆ. ಸಹಮತ ಸ್ನೇಹ ಆ ವಯಸ್ಸಿನಲ್ಲಿ ತಪ್ಪು ಎಂದು ಹೇಳಲು ಆಗುವುದಿಲ್ಲ. ಆದರೆ ಆ ಮಕ್ಕಳಿಗೆ ಅತ್ಯಾಚಾರ, ಲೈಂಗಿಕತೆ ಎನ್ನುವ ಬಗ್ಗೆ ಅಗತ್ಯ ಮಾಹಿತಿಯನ್ನು ನೀಡಬೇಕು. ಅನೇಕ ಮಕ್ಕಳು ಪ್ರೀತಿಸಿ ಓಡಿ ಹೋಗುತ್ತಾರೆ. ಪೋಷಕರು ದೂರು ನೀಡುತ್ತಾರೆ. ಆಗೆಲ್ಲ ಪೋಕ್ಸೊ ಪ್ರಕರಣ ದಾಖಲಾಗುತ್ತದೆ. ನ್ಯಾಯಾಲಯದ ತೀರ್ಪು ಬರುವ ತನಕ ಅವರ ಜೀವನ ನರಕವಾಗುತ್ತದೆ. ಮಕ್ಕಳಲ್ಲಿ ಬಹುತೇಕ ಸಹಮತದ ಸಂಬಂಧ ಇರುತ್ತದೆ ಎನ್ನುವ ಅಭಿಪ್ರಾಯವನ್ನು ಸಾಕಷ್ಟು ಅಧ್ಯಯನಗಳು ಹೇಳಿವೆ. ಆದರೆ ಅವರಿಗೆ ಬಲವಂತವೆಂದರೇನು ಅನ್ನುವುದೂ ಗೊತ್ತಿರಬೇಕು. ಮಗುವಿನ ಖಾಸಗಿ ಬದುಕು, ವೈಯಕ್ತಿಕ ಬದುಕನ್ನು ನೋಡದೆ ಪೋಷಕರ ದೂರಿನ ಕಾರಣಕ್ಕೆ ಅಪರಾಧದ ಹಣೆಪಟ್ಟಿ ಕಟ್ಟುವುದು ತಪ್ಪಬೇಕು. ಆ ನಿಟ್ಟಿನಲ್ಲಿ ಹಲವು ಅಧ್ಯಯನಗಳು ನಡೆದಿವೆ. ಅದರಲ್ಲಿ ಪಾಲ್ಗೊಂಡ ಕೆಲ ಮಕ್ಕಳು ಸಹಮತದ ಸ್ನೇಹವನ್ನು ಒಪ್ಪಿದ್ದಾರೆ. ಮದುವೆ ವಯಸ್ಸು ಬಂದಾಗ ಮದುವೆ ಆಗುವ ವಿಶ್ವಾಸವನ್ನೂ ವ್ಯಕ್ತಪಡಿಸಿದ್ದಾರೆ.

